<u>ದಿ:05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟಿಸವಾಲು : ವಾದಿ ಪರ ಶ್ರೀ. ಕೆ.ಎಸ್ ವಕೀಲರಿಂದ :</u>

1. ಶೀತಲ್ ಹಾಗೂ ಭಾರತಿಯವರು ನನಗೆ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ನನ್ನ ತಂಗಿ ಹಾಗೂ ನನ್ನ ತಾಯಿ ಎಂದು ನುಡಿಯುತ್ತಾರೆ.

2. 2002 ನೇ ಇಸವಿಯಲ್ಲಿ ನನ್ನ ವಯಸ್ಸು 10 ವರ್ಷ. 2002 ರ ಎಲ್ಲಾ ಕ್ರಯ ಪತ್ರಗಳನ್ನು ನನ್ನ ತಂದೆ ಹಾಗೂ ತಾಯಿ ಮಾಡಿದ್ದರು. 2002 ರ ಕ್ರಯ ಪತ್ರಗಳನ್ನು ಮಾಡಿಕೊಳ್ಳುವ ಮೊದಲು ನನ್ನ ತಂದೆ ಕಾನೂನು ಸಲಹೆ ಪಡೆದುಕೊಂಡಿದ್ದರು. ಸದರಿ ಕಾನೂನು ಸಲಹೆ ಪಡೆದುಕೊಂಡ ವಿಚಾರವನ್ನು ನನ್ನ ತಂದೆಯ ಲಿಖಿತ ತಕರಾರಿನ ಜೊತೆ ಹಾಕಿದ್ದಾರಾ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಪುರುಷ ಸಂಜೀವಪ್ಪ. 1982 ರ ಕ್ರಯ ಪತ್ರ ಆಗುವ ಸಂದರ್ಭದಲ್ಲಿ ಸಂಜೀವಪ್ಪ ಅವರ ಮಕ್ಕಳು ಹಾಗೂ ಮೊಮ್ಮಕ್ಕಳ ಸಹಿಯನ್ನು ಪಡೆದುಕೊಂಡಿದ್ದಾರಾ ಎಂದು ನನಗೆ ಗೊತ್ತಿಲ್ಲ.

3. ಈ ದಾವೆಯಲ್ಲಿ ವಾದಿ ಸಲ್ಲಿಸಿದ ಸಂತತಿ ನಕ್ಷೆಯನ್ನು ನಾನು ನೋಡಿದ್ದೇನೆ. 1982 ರಲ್ಲಿ ಕ್ರಯ ಪತ್ರ ಆಗುವ ಸಂದರ್ಭದಲ್ಲಿ ಸಂಜೀವಪ್ಪ ಅವರ ಪ್ರಾಪ್ತ ವಯಸ್ಕರಾಗಿದ್ದರು ಮತ್ತು ವಾದಿ ಸಂಖ್ಯೆ 2 ರಿಂದ 8 ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. 1982 ರ ಕ್ರಯ

ಪತ್ರದಲ್ಲಿ 1 ರಿಂದ 8 ನೇ ವಾದಿಗಳ ಹೆಸರು ಇಲ್ಲ ಮತ್ತು 2 ರಿಂದ 8 ನೇ ವಾದಿಗಳು ಅಪ್ರಾಪ್ತ ವಯಸ್ಕರಾಗಿದ್ದರು ಎಂಬ ಬಗ್ಗೆ ಸಹ ಉಲ್ಲೇಖ ಇಲ್ಲ. 1982 ರ ಕ್ರಯ ಪತ್ರದ ಸಂದರ್ಭದಲ್ಲಿ ನನ್ನ ತಂದೆಯ ಮಾರಾಟಗಾರರು ಯಾವುದೇ ಕಾನೂನು ಸಲಹೆ ತೆಗೆದುಕೊಂಡ ವಿಚಾರವಾಗಲೀ ಅಥವಾ ಪತ್ರಿಕಾ ಪ್ರಕಟಣೆ ನೀಡಿದ ವಿಚಾರವಾಗಲೀ ನನ್ನ ತಂದೆಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2002 ನೇ ಇಸವಿಯಲ್ಲಿ ನಾವು ಕ್ರಯ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ನನ್ನ ತಂದೆ ಅಥವಾ ತಾಯಿ ವಾದಿಗಳಿಗೆ ಆ ಬಗ್ಗೆ ಮಾಹಿತಿ ಕೊಟ್ಟಿಲ್ಲ. 1982 ರ ಕ್ರಯ ಪತ್ರದ ಸಂದರ್ಭದಲ್ಲಿ ನನ್ನ ತಂದೆಯ ಮಾರಾಟಗಾರರು ಕ್ರಯ ಪತ್ರ ಮಾಡಿಕೊಳ್ಳುತ್ತೇವೆ ಎಂದು ವಾದಿಗಳಿಗೆ ಮಾಹಿತಿ ಕೊಟ್ಟಿದ್ದಾರಾ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯ ಮೂಲ ಪುರುಷ ಸಂಜೀವಪ್ಪ ಅವರಿಗೆ ಅಂಜನಪ್ಪ, ಚಿನ್ನಪ್ಪ, ಮುನಿನಂಜಪ್ಪ ಮತ್ತು ಜಯರಾಮಪ್ಪ ಎಂಬ 4 ಜನ ಮಕ್ಕಳು ಎಂದರೆ ಸರಿ. ಅಂಜನಪ್ಪ ಅವರಿಗೆ ಸಂಜೀವಪ್ಪ, ನೀಲಮ್ಮ, ಗಿರಿಜಾ ಹಾಗೂ ಮಂಜುಳಾ ಎಂಬ 4 ಜನ ಮಕ್ಕಳು ಎಂದರೆ ಸರಿ. ಚಿನ್ನಪ್ಪ ಅವರಿಗೆ ಸುಶೀಲಮ್ಮ, ಯಶೋದಮ್ಮ, ಸಂಜೀವ, ರಾಧಮ್ಮ, ನಾಗರಾಜ ಮತ್ತು ಶಾಂತಮ್ಮ ಎಂಬ ಮಕ್ಕಳು ಎಂದರೆ ಸರಿ. ನಾಗರಾಜ ಹಾಗೂ ರವಿಕುಮಾರ್ ಎಂಬುವವರು ಜಯರಾಮ ಎಂಬುವವರ ಮಕ್ಕಳು ಎಂದರೆ ಸಾಕ್ಷಿ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ದಿನಾಂಕ 15.12.1982 ಹಾಗೂ 17.06.2002 ರ ಕ್ರಯ ಪತ್ರಗಳಲ್ಲಿ ವಾದಿಗಳ ಸಹಿ ಇಲ್ಲ ಎಂದರೆ ಸರಿ. ದಿನಾಂಕ 15.12.1982 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿ ಅಂಜನಪ್ಪ, ಚೆನ್ನಪ್ಪ, ಮುನಿನಂಜಪ್ಪ ಮತ್ತು ಜಯರಾಮಪ್ಪ ಅವರ ಪಿತ್ರಾರ್ಜಿತ ಆಸ್ತಿ ಎಂದು ಉಲ್ಲೇಖ ಆಗಿದೆ ಎಂದರೆ ಸರಿ. ಆ ರೀತಿಯಾಗಿ ಪಿತ್ರಾರ್ಜಿತ ಆಸ್ತಿ ಎಂದು ಉಲ್ಲೇಖ ಆದ ಕಾರಣ ಸದರಿ ಕ್ರಯ ಪತ್ರದಲ್ಲಿ ಅಂಜನಪ್ಪ, ಚೆನ್ನಪ್ಪ, ಮುನಿನಂಜಪ್ಪ ಮತ್ತು ಜಯರಾಮಪ್ಪ ಅವರ ವಾರಿಸುದಾರರ ಸಹಿ ಇದೆಯಾ ಎಂದು ನಾನು ಪರಿಶೀಲಿಸಿದ್ದೇನಾ ಎಂದರೆ ಸಾಕ್ಷಿ ಅವರ ವಾರಿಸುದಾರರ ಸಹಿ ಇಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.